

ನಡೆಸಿ ತಂಡವನ್ನು ಆಯ್ಕೆ ಮಾಡಬೇಕು. ಅ ಮೂಲಕ ತಮಗೂ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಅವರ ಮಾತಿಗೆ ಫೆಡರೇಷನ್ ಸೊಪ್ಪು ಹಾಕದ ಕಾರಣ ಕೋರ್ಟ್ ಮೆಟ್ಟಿಲೇರಿದರು. ಕೊನೆಗೂ ಸುಶೀಲ್ ಚಿತ್ ಆಗಬೇಕಾಯಿತು.

2010ರ ದೆಹಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದ ನರಸಿಂಗ್ ಯಾದವ್, ಹೋದ ವರ್ಷ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ಮತ್ತು 2014ರ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗಳಿಸಿದ್ದರು. ಆದ್ದರಿಂದಲೇ 26 ವರ್ಷದ ಉತ್ತರಪ್ರದೇಶದ ಕುಸ್ತಿಪಟು ಮೇಲೆ ಹೆಚ್ಚಿನ ನಿರೀಕ್ಷೆ ಮೂಡಿದೆ. ಕಳೆದ ಬಾರಿ ಕುಸ್ತಿಪಟುಗಳು ದೇಶಕ್ಕೆ ಎರಡು ಪದಕಗಳ ಕಾಣಿಕೆ ನೀಡಿದ್ದರು. ಅದರಲ್ಲಿ ಸುಶೀಲ್ ಅವರ ಬೆಳ್ಳಿ ಪದಕವೂ ಸೇರಿತ್ತು.

ಫ್ರೀಸ್ಟೈಲ್ ಕುಸ್ತಿಯ 60 ಕೆಜಿ ವಿಭಾಗದಲ್ಲಿ ಕಂಚು ಗೆದ್ದಿದ್ದ ಯೋಗೇಶ್ವರ್ ದತ್ ಅವರಿಂದ ಇನ್ನೂ ಉನ್ನತ ಸಾಧನೆಯ ನಿರೀಕ್ಷೆ ಇದೆ. ಇಂಚೆನ್ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಮತ್ತು ಗ್ಲಾಸ್ಗೊ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅವರು 65 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದರು. ಹೊಸ ವಿಭಾಗದಲ್ಲಿ ಅವರಿಗೆ ಕಠಿಣ ಸ್ಪರ್ಧೆ ಇದೆ. ಅದನ್ನು ಎದುರಿಸಲು 33 ವರ್ಷದ ಹರಿಯಾಣದ ಕುಸ್ತಿಪಟು ಯೋಗೇಶ್ವರ್ ಸಿದ್ಧರಾಗಿದ್ದಾರೆ.

57 ಕೆಜಿ ವಿಭಾಗದಲ್ಲಿ ಕಣಕ್ಕಿಳಿಯಲಿರುವ ಸಂದೀಪ್ ತೋಮರ್ ಬ್ಯಾಂಕಾಕ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು. ಮ್ಯಾಟ್‌ನಲ್ಲಿ ಚುರುಕಾಗಿ ಪಟ್ಟುಗಳನ್ನು ಹಾಕುವ ಸಂದೀಪ್ ಕೂಡ ನಾಕೌಟ್‌ನಲ್ಲಿ ತೊಡೆ ತಟ್ಟುವ ಸಾಮರ್ಥ್ಯ ಹೊಂದಿದ್ದಾರೆ.

ಗ್ರಿಕೊ ರೋಮನ್ ಕುಸ್ತಿಯಲ್ಲಿ ಸ್ಪರ್ಧಿಸುತ್ತಿರುವ ರವೀಂದರ್ ಖತ್ರಿ (65ಕೆಜಿ) ಮತ್ತು ಹರದೀಪ್ ಸಿಂಗ್ (98 ಕೆಜಿ) ಅವರು ಪದಕ ಗೆದ್ದುಬಿಟ್ಟರೆ ಭಾರತದ ಮಟ್ಟಿಗೆ ಮತ್ತೊಂದು ದಾಖಲೆ. ಈ ವಿಭಾಗದಲ್ಲಿ ಇದುವರೆಗೆ ಭಾರತಕ್ಕೆ ಪದಕ ಗೆಲ್ಲಲು ಸಾಧ್ಯವಾಗಿಲ್ಲ.

## ವನಿತೆಯರ ಕುಸ್ತಿ: ಗೀತಾ ಇಲ್ಲ

ವನಿತೆಯರ ವಿಭಾಗದ ಅನುಭವಿ ಕುಸ್ತಿಪಟು ಗೀತಾ ಪೋಗಟ್ ಇಲ್ಲದ ವನಿತೆಯರ ಕುಸ್ತಿ ತಂಡವು ರಿಯೊಗೆ ಹೋಗಿದೆ. ಇಸ್ತಾನ್‌ಬುಲ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಅಶಿಸ್ತು ತೋರಿದ್ದರು ಎಂಬ ಕಾರಣಕ್ಕೆ ಅವರನ್ನು ಭಾರತ ಕುಸ್ತಿ ಫೆಡರೇಷನ್ ತಾತ್ಕಾಲಿಕವಾಗಿ ಅಮಾನತು ಮಾಡಿತ್ತು. ಇದರಿಂದಾಗಿ ಅವರಿಗೆ ಅರ್ಹತೆ ಗಳಿಸಲು ಸಾಧ್ಯವಾಲಿಲ್ಲ.

ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ಭಾರತದ ಮೊದಲ ಮಹಿಳಾ ಕುಸ್ತಿಪಟು ಗೀತಾ ಪೋಗಟ್. ಅವರು 2004, 2008 ಒಲಿಂಪಿಕ್ಸ್‌ಗಳಲ್ಲಿ ಸ್ಪರ್ಧಿಸಿದ್ದರು. ನಂತರ ಕ್ಷಮಾಪಣೆ ಪತ್ರ ಬರೆದುಕೊಟ್ಟ ಬಬಿತಾಕುಮಾರಿ ಮತ್ತು ವಿನೇಶ ಪೋಗಟ್ ಅವರು ಮೂರನೇ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಿ





| ಕ್ರೀಡೆ | ಪುರುಷ | ಮಹಿಳೆ | ಒಟ್ಟು | ಸ್ಪರ್ಧೆ |
|---|---|---|---|---|
| ಅಥ್ಲೆಟಿಕ್ಸ್ | 20 | 16 | 36 | 21 |
| ಹಾಕಿ | 16 | 16 | 32 | 02 |
| ಶೂಟಿಂಗ್ | 09 | 03 | 12 | 11 |
| ಕುಸ್ತಿ | 05 | 03 | 08 | 08 |
| ಬ್ಯಾಡ್ಮಿಂಟನ್ | 03 | 04 | 07 | 04 |
| ಬಾಕ್ಸಿಂಗ್ | 03 | 00 | 03 | 03 |
| ಗಾಲ್ಫ್ | 02 | 01 | 03 | 02 |
| ಟೇಬಲ್ ಟೆನಿಸ್ | 02 | 02 | 04 | 02 |
| ಟೆನಿಸ್ | 02 | 02 | 04 | 03 |
| ಆರ್ಚರಿ | 01 | 03 | 04 | 03 |
| ಜುಡೊ | 01 | 00 | 01 | 01 |
| ರೋಯಿಂಗ್ | 01 | 00 | 01 | 01 |
| ಈಜು | 01 | 01 | 02 | 02 |
| ವೇಟ್‌ಲಿಫ್ಟಿಂಗ್ | 01 | 01 | 02 | 02 |
| ಜಿಮ್ನಾಸ್ಟಿಕ್ಸ್ | 00 | 01 | 01 | 01 |
| ಒಟ್ಟು | 67 | 53 | 120 | 66 |